

# ಜಾತಿ... ಮೀಸಲಾತಿ...

ಮಧುರಾ ಕರ್ಣಂ

ಕಲೆ: ಭಾವು ಪತ್ತಾರ

ಇದೇನು, ಹಾವಿನ ಹುತ್ತಕ್ಕೇ ಕೈ ಇಟ್ಟಿದ್ದಾಳಲ್ಲಾ... ಜಾತಿಯ ಬಗ್ಗೆ ಬರೆಯುತ್ತಿದ್ದಾಳೆ... ಎನ್ನುತ್ತೀರಾ? ಇದು ಆ 'ಜಾತಿ' ಅಲ್ಲ ಬಿಡಿ. ಇವೆಲ್ಲ ನಿರಾತಂಕವಾದ, ನಿರಾಬಾಧಿತ ಜಾತಿಗಳು. ಇದರಲ್ಲೂ ಮೀಸಲಾತಿಗಳಿವೆ. ಕೆಟಗರಿಗಳಿವೆ. ಪ್ರಪಂಚದಲ್ಲೆಲ್ಲ ಈ ಜಾತಿಯವರು ತುಂಬಿದ್ದಾರೆ. ನೀವೂ ಅದರಲ್ಲಿ ಖಂಡಿತ ಸೇರಿಕೊಂಡಿದ್ದೀರಿ... ಒಂದಲ್ಲಾ ಒಂದು ರೀತಿಯಲ್ಲಿ. ಇದೇನಪ್ಪಾ... ತಲೆ ಕೆಟ್ಟು ಗೋಜಲಾಗ್ತಾ ಇದೆ ಅಂದ್ರಾ... ಈ ಜಾತಿಗಳ ಬಗ್ಗೆ ನೋಡೋಣ ಬನ್ನಿ.

ನಮ್ಮ ಮನೆಯಲ್ಲಿ ನನ್ನ ಪತಿ 'ಫ್ರೆಶ್' ಜಾತಿ. ತಂಗಳು ಮುಟ್ಟುವುದಿಲ್ಲ. ಬೆಳಗಿನ ಸಾರು, ಪಲ್ಯ, ಚಟ್ನಿ ಇವೆಲ್ಲ ಸಂಜೆಗೆ ಬಿಡಿ, ಮಧ್ಯಾಹ್ನಕ್ಕೇ ವರ್ಜ್ಯ. ನಾನು, ನನ್ನ ಮಕ್ಕಳು ಪರವಾಗಿಲ್ಲ. ಉಳಿದಿದ್ದರೆ ಸಂಜೆ, ನಾಳೆ ತಿನ್ನುತ್ತೇವೆ. ತವರಿನಲ್ಲಿ ನಿನ್ನೆಯ ತಂಗಳು ಮೊದಲು ಮುಗಿಸಿ ಅನಂತರ ಇಂದಿನ ಅಡಿಗೆ ಉಣ್ಣುವ ಕ್ರಮ. ಇಲ್ಲಿ ಪತಿಗೆ ಮಾತ್ರ ಏನೇ ಆಗಿದ್ದರೂ ಅದು ತಾಜಾ ಇರಬೇಕು. ಅನ್ನ ಉಳಿದಿದ್ದರೆ ರಾತ್ರಿಗೆ ಮೊಸರನ್ನ ಕಲೆಸಿಕೊಳ್ಳುತ್ತಾರಷ್ಟೆ. ಸಂಜೆಗೇ ನಡೆಯುವುದಿಲ್ಲವೆಂದ ಮೇಲೆ ನಾಳೆಯ ಕತೆ ಕೇಳಲೇಬೇಡಿ. ತಂಗಳು ಪೆಟ್ಟಿಗೆಯಲ್ಲಿಟ್ಟು ಬಿಸಿ